## ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

# CC No.1184/2014

| | |
|---|---|
| ಸಾಕ್ಷಿದಾರರ ಹೆಸರು | ನಿಂಗಪ್ಪ ಕಾರ್ನಾಳ್ |
| ತಂದೆಯ ಹೆಸರು | ತಿಪ್ಪಣ್ಣ ಕಾರ್ನಾಳ್ |
| ವಯಸ್ಸು | 35 ವರ್ಷ |
| ವೃತ್ತಿ | ಗಸ್ತು ಅರಣ್ಯ ಪಾಲಕ, ಹೊಸಕೋಟೆ ವನ್ಯ ಜೀವಿ ವಲಯ |
| ವಿಳಾಸ | ಹೊಸಕೋಟೆ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 10.04.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ನಾನು ಪ್ರಸ್ತುತ ಪ್ರಕರಣದಲ್ಲಿ 1ನೇ ಆರೋಪಿಯನ್ನು ಮಾತ್ರ ನೋಡಿರುತ್ತೇನೆ. ಅವರು ಈ ದಿನ ಹಾಜರಿರುತ್ತಾರೆ. ಉಳಿದವರು ಗೊತ್ತಿಲ್ಲ. ಚಾಸಾ-1 ರಿಂದ 4, 6 ರಿಂದ 9 ಮತ್ತು 11 ರವರು ಗೊತ್ತು.

2013 ರಿಂದ 2019 ರವರೆಗೂ ನಾನು ಅರಣ್ಯ ರಕ್ಷಕನಾಗಿ ಸಂಗಮ ವನ್ಯ ಜೀವಿ ವಲಯದಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ22.09.2014 ರಂದು ಕಾವೇರಿ ಅಭಯಾರಣ್ಯದ ಸಂಗಮ ವನ್ಯ ಜೀವಿ ವಲಯದ ಮುಗ್ಗೂರು ಶಾಖೆಯ ಚಾವರ್ ಕಲ್ ಮೀಸಲು ಅರಣ್ಯ ಪ್ರದೇಶದಲ್ಲಿ ಹಾಗೂ ಬಾಲ್ ದಾನೆ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಚಾಸಾ-1 ರವರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ಸಿಬ್ಬಂದಿಗಳಾದ ನಾನು ಚಾಸಾ-2 ರಿಂದ 4 ಹಾಗೂ 6 ಮತ್ತು 7 ರವರು ಮದ್ಯರಾತ್ರಿ 2 ಗಂಟೆ ಸಮಯದಲ್ಲಿ ಬಾಲ್ ದಾನೆ

ಅರಣ್ಯ ಪ್ರದೇಶಕ್ಕೆ ಹೋಗಿದ್ದು ಅಲ್ಲಿ ಯಾರೋ ಅಸಾಮಿಗಳು ಟರ್ಚ ಹಾಕಿಕೊಂಡು ಬರುತ್ತಿರುವುದು ಕಂಡು ಬಂತು. ನಂತರ ನಾವು ಅಲ್ಲೆ ಪೊದೆಗಳಲ್ಲಿ ಅಡಗಿ ಕುಳಿತಿದ್ದು ಅವರು ಬರುವ ದಾರಿಯಲ್ಲಿ ನಾವು ವೀಕ್ಷಣೆ ಮಾಡುತ್ತಾ ಕುಳಿತಿದ್ದೇವು. ನಂತರ ಅವರು ಆ ದಾರಿಗೆ ಬಂದಾಗ ನಾವುಗಳು ಹಿಡಿಯಲು ಪ್ರಯತ್ನ ಮಾಡಿದ್ದು ಅದರಲ್ಲಿ ಕೇವಲ ಒಬ್ಬ ಆರೋಪಿ ಸಿಕ್ಕಿರುತ್ತಾನೆ ಉಳಿದವರು ತಪ್ಪಿ ಸಿಕೊಂಡು ಕಾಡಿನತ್ತ ಓಡಿ ಹೋಗಿರುತ್ತಾನೆ. ಸಿಕ್ಕಿದ್ದ ಒಬ್ಬ ಅಸಾಮಿಯನ್ನು ಪರಿಶೀಲನೆ ಮಾಡಿದಾಗ ಆತನ ಬಳಿ ಒಂದು ಒಂಟಿ ನಾಡಬಂದೂಕು ಹಾಗು ಮದ್ದಿನ ಚೀಲ ಸಿಕ್ಕಿರುತ್ತದೆ.

ಉಳಿದವರು ಓಡಿ ಹೋದ ಪ್ರದೇಶದಲ್ಲಿ ನಾವು ಪರಿಶೀಲನೆ ಮಾಡಿದಾಗ ಅಲ್ಲಿ 2 ಚೀಲ, 2 ಹಣೆ ಬ್ಯಾಟರಿ, ಒಂದು ಚಾಕು, ಇನ್ನೆರಡು ಒಂಟಿ ನಳಿಕೆ ಬಂದೂಕುಗಳು ಸಿಕ್ಕಿರುತ್ತದೆ. ನಂತರ 2 ಚೀಲಗಳನ್ನು ತೆರೆದು ಪರಿಶೀಲನೆ ಮಾಡಿದಾಗ ಒಂದು ಚೀಲದಲ್ಲಿ ಕಾಡು ಕುರಿಯ ಮಾಂಸ, ಅದರ ತಲೆ ಕಾಲುಗಳು ಹಾಗು ಚರ್ಮ ಸಿಕ್ಕಿರುತ್ತವೆ. ಇನ್ನೊಂದು ಚೀಲದಲ್ಲಿ ಮುಳ್ಳುಹಂದಿಯ ಮುಳ್ಳನ್ನು ತೆಗೆದು ಅದರ ಮಾಂಸವು ಇಟ್ಟಿರುವುದು ಸಿಕ್ಕಿರುತ್ತದೆ. 1ನೇ ಆರೋಪಿಯನು ನಂತರ ವಿಚಾರಣೆ ಮಾಡಿದಾಗ ಆತ ಉಳಿದ ಆರೋಪಿತರ ಜೊತೆ ಸೇರಿಕೊಂಡು ಕಾಡಿನಲ್ಲಿ 3 ನಾಡಬಂದೂಕುಗಳ ಮೂಲಕ ಒಂದು ಕಾಡು ಕುರಿ ಹಾಗೂ ಮುಳ್ಳಹಂದಿಯನ್ನು ಬೇಟೆಯಾಡಿ ಕೊಂದು ಅದರ ಮಾಂಸವನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ.

ನಂತರ ಸದರಿ ಅಸಾಮಿಗಳ ಹೆಸರನ್ನು ವಿಚಾರಣೆ ಮಾಡಲಾಗಿ ಆತನ ಹೆಸರು ರಾಜು ಬಿನ್ ಬಸವಯ್ಯ, ಓಡಿ ಹೋದ ಅಸಾಮಿಗಳ ಹೆಸರು ಕುಮಾರ ಬಿನ್ ಕರಿಗೌಡ, ಮುಖೇಶ್, ಮಂಜು ಬಿನ್ ಪುಟ್ಟಣ್ಣ, ಶಿವಕುಮಾರ್ ಬಿನ್ ಮಲ್ಲೇಶ್ ಎಂದು ಅವರ ವಿವರಗಳನ್ನು 1ನೇ ಆರೋಪಿ ನಮಗೆ ತಿಳಿಸಿರುತ್ತಾನೆ. ನಂತರ ಸದರಿ ವಸ್ತುಗಳು ಹಾಗೂ ಮಾಂಸದ ಚೀಲಗಳ ಮೇಲೆ ನಮ್ಮ ಇಲಾಖಾ ಗುರುತು ಅಂದರೆ ಎಫ್ ಒ ಸಿ 7/2014-15 ಎಂದು ವಿಶೇಷ ಗುರುತನ್ನು ನೀಡಿರುತ್ತೇವೆ. ನಂತರ ಸದರಿ ಅಸಾಮಿಗಳು ಕಾನೂನು ಉಲ್ಲಂಘನೆ ಮಾಡಿರುವ ಕಾರಣ ಅವರಿಗೆ ವಿಚಾರವನ್ನು ತಿಳಿಸಿ 1ನೇ ಆರೋಪಿ

ಯನ್ನು ದಸ್ತಗಿರಿ ಮಾಡಿರುತ್ತೇವೆ. ಸದರಿ ವಸ್ತುಗಳನ್ನು ಸರ್ಕಾರದ ಪರ ಅಮಾನತು ಪಡಿಸಿಕೊಂಡು ಮದ್ಯರಾತ್ರಿ 3 ಗಂಟೆಯಿಂದ 4 ಗಂಟೆಯವರೆಗೂ ಮಹಜರ್ ನ್ನು ಮಾಡಿ ಸದರಿ ಮಹಜರ್ ನ್ನು ನಾನೇ ಬರೆದಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಮಹಜರ್ ನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಮು.ಮ-1 ರಿಂದ 11 ನ್ನು ನೋಡಿ ಗುರುತಿಸುತ್ತಾರೆ. ನಾನು ಈ ಸಂಬಂಧ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದ**

ನಮ್ಮಲ್ಲಿ ನಾವು ಗಸ್ತಿಗೆ ಹೋಗುವ ಸಂಬಂಧ ಅಥವಾ ಹಾಜರಾತಿ ತೋರಿಸುವ ಸಂಬಂಧ ಯಾವುದೇ ಬುಕ್ ಇರುವುದಿಲ್ಲ. ನಾನು ಸದರಿ ದಿನ ಸದರಿ ಸ್ಥಳದಲ್ಲಿ ದಾಳಿ ಹೋಗಿರುವ ಬಗ್ಗೆ ತನಿಖಾಧಿಕಾರಿಯು ನನ್ನ ಬಳಿ ಯಾವುದೇ ಹಾಜರಾತಿ ಪುಸ್ತಕವನ್ನು ಪಡೆದುಕೊಂಡಿರುವುದಿಲ್ಲ. ಚಾಸಾ-1 ನಮ್ಮಗಳ ಮೇಲಾಧಿಕಾರಿ ಎಂದರೆ ಹೌದು. ಅದೇ ರೀತಿ ಚಾಸಾ-2 ರವರು ಸಹ ನಮ್ಮ ಮೇಲಾಧಿಕಾರಿ ಎಂದರೆ ಹೌದು ಎಂದು ನುಡಿಯುತ್ತಾರೆ. ಚಾಸಾ-3 , 4, 6 ರಿಂದ 9 ನಮ್ಮ ಸಿಬ್ಬಂದಿಗಳೇ ಎಂದರೆ ಸರಿ. ನಮಗೆ ಮಾಹಿತಿ ರಾತ್ರಿ 1.30 ಗಂಟೆ ಸಮಯಕ್ಕೆ ಬಂದಿರುತ್ತದೆ. ಈ ರೀತಿ 1.30 ಗಂಟೆಗೆ ನಮಗೆ ಮಾಹಿತಿ ಬಂದಿರುವ ಬಗ್ಗೆ ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ನಿಪಿ-1 ರಲ್ಲಿಯೂ ಸಹ ಈ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ರಾತ್ರಿ 1.30 ಗಂಟೆ ಸಮಯದಲ್ಲಿ ಅಲ್ಲಿ ಯಾರು ಯಾರು ಇದ್ದರು ಎಂದು ನಮಗೆ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಒಬ್ಬ ಅಸಾಮಿಯನ್ನು ಹಿಡಿದ ನಂತರ ಈ ಬಗ್ಗೆ ತಿಳಿದು ಬಂದಿರುತ್ತದೆಂದು ನುಡಿಯುತ್ತಾರೆ. ಕತ್ತಲೆಯಾದ ಕಾರಣ ಹಿಡಿದ ಒಬ್ಬ ಅಸಾಮಿ ಯಾರೆಂದು ಗುರುತಿಸಲು ಆಗುವುದಿಲ್ಲ ಎಂದರೆ ಸಾಕ್ಷಿಯು ಹಿಡಿದ ನಂತರ ಗೊತ್ತಾಗಿರುತ್ತದೆಂದು ನುಡಿಯುತ್ತಾರೆ.

1ನೇ ಆರೋಪಿಯು ನಾನು ಹೇಳಿದ ರೀತಿಯಲ್ಲಿ ಸದರಿ ಅರಣ್ಯ ಪ್ರದೇಶಕ್ಕೆ ಹೋಗಿರುವುದಿಲ್ಲ ಹಾಗೂ ಯಾವುದೇ ಬೇಟೆಯಾಡಿರುವುದಿಲ್ಲ ಎಂದರೆ ಸಾಕ್ಷಿಯ ಅವರ ಕೈಯಲ್ಲಿ ಬಂದೂಕು ಇತ್ತು ಎಂದು ನುಡಿಯುತ್ತಾರೆ. ಮು.ಮ-1 ರಿಂದ 11 ಸದರಿ ಆರೋಪಿಗೆ ಸೇರಿದ ವಸ್ತುಗಳು ಅಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ನಮ್ಮ ಕಚೇರಿಯಲ್ಲಿ ಹಳೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂದೂಕು ಹಾಗೂ ಇತರೆ ವಸ್ತುಗಳನ್ನು ಇರಿಸಲಾಗಿರುತ್ತದೆಂದರೆ ಸರಿ. ಈ ರೀತಿ ಇರುವ ವಸ್ತುಗಳನ್ನು ನಾವು ಪ್ರಸ್ತುತ ಪ್ರಕರಣದಲ್ಲಿ ಬನಾವಟ್ ಮಾಡಿ ಹಾಜರು ಪಡಿಸಿರುತ್ತೇವೆಂದರೆ ಸಾಕ್ಷಿಯು ಇದು ಸ್ಥಳದಲ್ಲಿ ವಶಪಡಿಸಿಕೊಂಡ ವಸ್ತುಗಳಾಗಿದ್ದು ಅವುಗಳಿಗೆ ಗುರುತನ್ನು ನೀಡಿರುತ್ತೇವೆಂದು ನುಡಿಯುತ್ತಾರೆ. ಆರೋಪಿಗಳು ಸದರಿ ದಿನ ಸ್ಥಳದಲ್ಲಿ ಇರಲಿಲ್ಲ, 1ನೇ ಆರೋಪಿ ಬಳಿ ಯಾವುದೇ ವಸ್ತುಗಳು ಇರಲಿಲ್ಲ ಹಾಗೂ ಯಾವುದೇ ಪ್ರಾಣಿಗಳ ಮಾಂಸದ ಚೀಲಗಳು ಸಹ ಇರಲಿಲ್ಲ ಆದರೂ ಸಹಿತ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷೆ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1ನೇ ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಕೇವಲ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷೆ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ದಿನ ಮಾಹಿತಿ ಬರುವ ಸಮಯದಲ್ಲಿ ನಾವು ಚೆಕ್ ಪೋಸ್ಟ ಬಳಿ ಇದ್ದೇವು. ಸದರಿ ಸ್ಥಳವನ್ನು ನಾವು 1.30 ಗೆ ಬಿಟ್ಟಿರುತ್ತೇವೆ. ಸದರಿ ಚೆಕ್ ಪೋಸ್ಟ ಯಿಂದ ಘಟನಾ ಸ್ಥಳಕ್ಕೆ ಸುಮಾರು 45 ನಿಮಿಷಗಳ ಕಾಲ ಬೇಕಾಗುತ್ತದೆ. ಈ ಬಗ್ಗೆ ನಿಪಿ-1 ಹಾಗೂ ನನ್ನ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ. ನಿಪಿ-1 ಕ್ಕೆ ನಮ್ಮ ಇಲಾಖಾ ಸಿಬ್ಬಂದಿಗಳೇ ಸಹಿ ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರಿದು ಸ್ಥಳದಲ್ಲಿ ಸ್ಥಳೀಕರು ಯಾರು ಸಿಗದೇ ಇರುವುದರಿಂದ ನಾವೇ ಪಂಚರಾಗಿರುತ್ತೇವೆಂದು ನುಡಿಯುತ್ತಾರೆ. ನಿಪಿ-1 ನ್ನು ಕಚೇರಿಯಲ್ಲೇ ಬನಾವಟ್ ಮಾಡಿ ನಾವುಗಳು ಸಹಿ ಮಾಡಿ ಹಾಜರು ಪಡಿಸಿರುತ್ತೇವೆಂದರೆ ಸರಿಯಲ್ಲ. ಆರೋಪಿತರು ವ್ಯವಸಾಯ ಮಾಡುವ ವ್ಯಕ್ತಿಗಳಾಗಿದ್ದು ಕಾಡಿನಲ್ಲಿ ನುಗ್ಗಿ ಯಾವುದೇ

ಬೇಟೆಯಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಗಸ್ತು ಮಾಡುತ್ತಿದ್ದ ಸ್ಥಳದಿಂದ ಘಟನಾ ಸ್ಥಳಕ್ಕೆ ಸುಮಾರು 15 ಕಿ.ಮೀಟರ್ ಅಂತರವಿದೆ. ಅದು ದಟ್ಟವಾದ ಅರಣ್ಯ ಪ್ರದೇಶ ಎಂದರೆ ಸರಿ .

ನಾವು ಸದರಿ ಪ್ರದೇಶಕ್ಕೆ ನಮ್ಮ ಸರ್ಕಾರಿ ಜೀಪಿನಲ್ಲಿ ಹೋಗಿರುತ್ತೇವೆ. ನಿಪಿ-1 ಹಾಗೂ ಹೇಳಿಕೆಯಲ್ಲಿ ಈ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ನಾವು ಆರೋಪಿಯನ್ನು ಸದರಿ ಸ್ಥಳದಲ್ಲಿ ದಸ್ತಗಿರಿ ಮಾಡಿರುವುದಿಲ್ಲ ಕೋಡಿಹಳ್ಳಿಯಲ್ಲಿ ದನ ಮೇಯಿಸುತ್ತಿದ್ದ ಪ್ರಸ್ತುತ ಆರೋಪಿತರನ್ನು ಪ್ರಕರಣದಲ್ಲಿ ಸಿಲುಕಿಸಲು ದಸ್ತಗಿರಿ ಮಾಡಿರುತ್ತೇವೆಂದರೆ ಸರಿಯಲ್ಲ. 1ನೇ ಆರೋಪಿಯು ಮಳ್ಳಿಪುರ ಗ್ರಾಮ ಕೋಡಿಹಳ್ಳಿ ಹೋಬಳಿಯವರು ಎಂದರೆ ಸರಿ. ಆತ ದನಗಳನ್ನು ಒಂದು ಬಯಲು ಪ್ರದೇಶದಲ್ಲಿ ಮೇಯಿಸುತ್ತಿದ್ದ ಸಮಯದಲ್ಲಿ ಉದ್ದೇಶಪೂರ್ವಕವಾಗಿ ಆತನನ್ನು ದಸ್ತಗಿರಿ ಮಾಡಿರುತ್ತೇವೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಿತ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ 2 ರಿಂದ 5ನೇ ಆರೋಪಿ ಪರ ವಕೀಲರಿಂದ**

2 ರಿಂದ 5ನೇ ಆರೋಪಿತರೇ ಸದರಿ ದಿನ ಸದರಿ ಸ್ಥಳದಲ್ಲಿದ್ದರು ಎಂದು ನನಗೆ ಖಚಿತವಾಗಿ ಗೊತ್ತಿಲ್ಲ ಎಂದರೆ ಸಾಕ್ಷಿಯು ಅವರು ಅಲ್ಲಿ ಪರಾರಿಯಾಗಿದ್ದರಿಂದ ಸರಿಯಾಗಿ ನೋಡಿಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿಯನ್ನು ಬಲವಂತವಾಗಿ ದಸ್ತಗಿರಿ ಮಾಡಿ ಉಳಿದ ಆರೋಪಿತರನ್ನು ಬೇಕೆಂದಲೇ ಆತನ ಬಳಿ ಹೇಳಿಸಿರುತ್ತೇವೆಂದರೆ ಸರಿಯಲ್ಲ. ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ** **ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**